ಅನುಗುಣವಾಗಿ ವಿಪರೀತವಾಗಿ ಮಳೆಯೂ ಸುರಿಯಲಾರಂಭಿಸಿತು. ಆಗ ನನಗಿನ್ನೇನು ಕೆಲಸ, ನಾನೆಲ್ಲಿದ್ದೇನೆ, ನನ್ನ ಜಾತಿಯ ಮರಗಳು ಎಲ್ಲೆಲ್ಲಿವೆ ಎಂಬುದನ್ನೆಲ್ಲ ಈಕ್ಷಿಸಲಾರಂಭಿಸಿದೆ. ಭಾರತದ ಪಶ್ಚಿಮ ಘಟ್ಟದಲ್ಲಿರುವ ಗಿರಿಕಂದರಗಳ ಶ್ರೇಣಿಯಲ್ಲಿ ನಾನು ಪವಡಿಸಿದ್ದೆ. ಅರಬ್ಬೀಸಮುದ್ರಕ್ಕೆ ಸಮಾನಾಂತರವಾಗಿ ಹಬ್ಬಿದ್ದ ಈ ಕಾಡುಪ್ರದೇಶವು ಅತ್ಯಂತ ಸೂಕ್ಷ್ಮಜೀವಿ ಪರಿಸರವಂತೆ. ಇಲ್ಲಿ ಮಡಿಕೆ ಮಡಿಕೆಯಂತೆ ಕಾಣುವ ಬೆಟ್ಟಗುಡ್ಡಗಳೆಲ್ಲ ಕೋಟ್ಯಂತರ ವರ್ಷಗಳ ಹಿಂದೆ ಭೂ ಒತ್ತಡದಿಂದ ನಿರ್ಮಾಣವಾದವುಗಳಂತೆ. ಇಂಥ ದಿವ್ಯ ಸಹ್ಯಾದ್ರಿ ಶ್ರೇಣಿಯ ಕಾಡಿನಲ್ಲಿ ಹುಟ್ಟಿಹರಿಯುತ್ತಿರುವ ನೂರಾರು ಪೂರ್ವಾಭಿಮುಖಿ, ಪಶ್ಚಿಮಾಭಿಮುಖಿ ನದಿಗಳು ಸುಮಾರು ಐದು ಸಾವಿರದಷ್ಟು ಜಾತಿಯ ಸಸ್ಯಸಂಕುಲವನ್ನೂ, ನೂರೈವತ್ತು ಬಗೆಯ ಸಸ್ತನಿಗಳನ್ನೂ, ಐನೂರಕ್ಕೂ ಹೆಚ್ಚು ವಿಧದ ಪಕ್ಷಿಗಳನ್ನೊಳಗೊಂಡ ಜೀವಸಂಕುಲವನ್ನು ಜೀವಂತವಾಗಿಟ್ಟಿದೆಯಂತೆ. ಇನ್ನು ಮೀನುಗಳು, ಸರೀಸೃಪಗಳು, ಉಭಯವಾಸಿಗಳು, ಚಿಟ್ಟೆಗಳಿಗಂತೂ ಲೆಕ್ಕವೇ ಇಲ್ಲ. ಇಂಥ ಪರಿಸರದಲ್ಲಿ ವಾಸಿಸುತ್ತಿರುವೆನೆಂಬ ಹೆಮ್ಮೆಗಿಂತ ಇನ್ನೇನು ಪ್ರತಿಷ್ಠೆ ಬೇಕು ನನಗೆ. ಇಂಥ ಪರಿಸರದಲ್ಲಿ ಹುಟ್ಟಿ ಬೆಳೆದ ನಾನು ದಿನಾಲು ಸೂರ್ಯೋದಯದಲ್ಲಿ ಕಂಗೊಳಿಸುವ ಬಂಗಾರ ಬಣ್ಣದ ರಶ್ಮಿಯನ್ನು ಆಸ್ವಾದಿಸುತ್ತ, ಮಧ್ಯಾಹ್ನದ ಬೆಚ್ಚನೆಯ ಬಿಸಿಲಿನ ಸಂಸರ್ಗದಲ್ಲಿ ಪತ್ರಹರಿತ್ತಿನಿಂದ ಆಹಾರ ಉತ್ಪಾದಿಸಿಕೊಳ್ಳುತ್ತಾ, ನಟ್ಟನಡುವೆ ನೆತ್ತಿಯ ಮೇಲೆ ಕಾಣುತ್ತಿದ್ದ ಆತನನ್ನು ಮುಟ್ಟುವುದೇ ನನ್ನ ಜೀವಮಾನದ ಸಾಧನೆಯೆಂಬಂತೆ ಬೆಳೆದೆ. ಸೂರ್ಯಾಸ್ತವನ್ನು ಕಣ್ತುಂಬಿಕೊಳ್ಳುತ್ತಾ ಸಮುದ್ರ ದಂಚಿನ ಕ್ಷಿತಿಜದಲ್ಲಿ ಕಣ್ಮರೆಯಾಗಿ ಕದ್ದು ಎಲ್ಲಿಗೆ ಹೋಗುತ್ತಾನೆ ಎಂದು ಕುತೂಹಲದಿಂದ ಇಣುಕಿ ನೋಡುತ್ತಲೇ ಬೆಳೆದೆ. ಮಳೆಯ ಸಿಂಚನಕ್ಕೆ ಮೋಡದ ನಾಡಿನ ಬಾಗಿಲಿಗೆ ಕಮಾನು ಕಟ್ಟಿದ ಕಾಮನಬಿಲ್ಲುಗಳನ್ನು ನೋಡುತ್ತ ಬೆಳೆದೆ.

ನನ್ನಿಂದ ಮೂರೇ ಮೈಲಿ ದೂರದಲ್ಲಿ ನದಿ ದಂಡೆಯಲ್ಲಿದ್ದ ಪಂಚವರ್ಣೆಯಲ್ಲಿ ಕ್ರಮೇಣ ಮನೆಗಳ ಸಂಖ್ಯೆ ಜಾಸ್ತಿಯಾಗಲಾರಂಭಿಸಿತ್ತು. ಪಂಚವರ್ಣೆಯ ನದಿನೀರನ್ನು ಮೊಗೆಮೊಗೆದು ಕುಡಿಯುವ ಆತುರದಲ್ಲಿ ದೂರದಿಂದ ಜನರು ಇಲ್ಲಿಗೆ ಬರುತ್ತಿದ್ದರಂತೆ. ನದಿಯ ದಂಡೆಗುಂಟ ಬೆಳೆದಿದ್ದ ಆ ಊರೇ ಅವತ್ತಿಗೆ ಅತ್ಯಂತ ದೊಡ್ಡ ಊರಾಗಿತ್ತು. ನದಿಯ ಆ ದಂಡೆ ಈ ದಂಡೆಯುದ್ದಕ್ಕೂ ಭತ್ತದ ಗದ್ದೆಗಳು ವಿಪುಲವಾಗಿ ಕಾಣಲಾರಂಭಿಸಿದ್ದವು. ನೀರಾವರಿ ಇಲ್ಲದ ಬಟಾಬಯಲಾಗಿದ್ದ ಪ್ರದೇಶಗಳಲ್ಲೆಲ್ಲ ರೈತರು ರಾಗಿ, ಜೋಳ, ನವಣೆ, ಸಜ್ಜೆ ಮುಂತಾದವನ್ನು ಬೆಳೆಯುತ್ತಿದ್ದರೆ, ಸಮೃದ್ಧ ನೀರಾವರಿಯಿಂದ ತುಂಬಿ ತುಳುಕುತ್ತಿದ್ದ ಇಲ್ಲಿ ಮಾತ್ರ ಭತ್ತ ಬೆಳೆಯುತ್ತಿದ್ದುದು. ಬಿಟ್ಟರೆ ಅಲ್ಲೆಲ್ಲೋ ಒಂದೊಂದು ಕಡೆ ಕೆರೆಯ ಹಿಂದೆ ಅಲ್ಪಸ್ವಲ್ಪ ಬೆಳೆಯುತ್ತಿದ್ದರು ಅಷ್ಟೇ. ಆದ್ದರಿಂದ ಹಳ್ಳಿಯವರೆಲ್ಲ ಅನ್ನವನ್ನು ಸಿಹಿ ತಿನಿಸಿನಂತೆ ಬಾಯಲ್ಲಿ ನೀರೂರಿಸಿಕೊಂಡು ತಿನ್ನಲು ಕಾಯುತ್ತಿದ್ದರು. ಹಾಗೆ ಅನ್ನ ಮಾಡುತ್ತಿದ್ದುದೂ ವರ್ಷಕ್ಕೆ ಒಮ್ಮೆಯೋ ಎರಡೋ ಬಾರಿಯೋ... ಅದೂ ಹಬ್ಬ ಹರಿದಿನಗಳಿದ್ದಾಗ ಮಾತ್ರ.

ಹಳ್ಳಿಯ ಹೆಣ್ಣುಮಕ್ಕಳು ಗದ್ದೆ ಕೆಲಸದ ನಂತರ ವಾರಕ್ಕೊಮ್ಮೆ ಕೆರೆಗೋ ಬಾವಿಗೋ ಹೋಗಿ ಬಟ್ಟೆ ಒಗೆದುಕೊಂಡು, ಸ್ನಾನ ಮಾಡಿಕೊಂಡು ಬರುತ್ತಿದ್ದರೆ, ನಗರದ ಹೆಣ್ಣುಮಕ್ಕಳು ಈ ಸಿಹಿವರ್ಣಾ ನದಿಗೆ ವಾರಕ್ಕೊಮ್ಮೆ ಬಟ್ಟೆ ತೊಳೆಯಲು, ಸ್ನಾನ ಮಾಡಲು ಹೋಗುತ್ತಿದ್ದರು. ಬೇಸಿಗೆಯಲ್ಲಿ ತೆಳ್ಳಗೆ ಹರಿಯುತ್ತಿದ್ದ ನೀರಿನಿಂದಾಗಿ ಮೊಣಕಾಲುದ್ದದ ಶುದ್ಧ ನೀರನ್ನು ಹುಡುಕಿಕೊಂಡು ಹುಡುಗಿಯರು ನದಿ ಮಧ್ಯದವರೆಗೆ ಹೋಗುತ್ತಿದ್ದರು. ಸೀರೆ ಲಂಗ ದಾವಣಿ ನೆನೆಯದಿರಲೆಂದು ಸ್ವಲ್ಪ ಮೇಲೆತ್ತಿಕೊಳ್ಳುತ್ತಿದ್ದಾಗ ಕಾಣುತ್ತಿದ್ದ ಮೀನಖಂಡಗಳ ಸೌಂದರ್ಯವನ್ನು ಸವಿಯಲೆಂದೇ ಪೋಲಿ ಹುಡುಗರು ಈಜು ಕಲಿಯುವ ನೆಪದಲ್ಲಿ ನದಿಗೆ ಬಿದ್ದು ಬೆಳಗಿನಿಂದ ಸಂಜೆವರೆಗೆ ಇಣುಕಿಣುಕಿ ನೋಡುತ್ತಿರುತ್ತಿದ್ದರು. ಹದಿಹರೆಯದ ಹುಡುಗಿಯರು ಒಗೆದು ಒಣಗಿದ ಬೇರೊಂದು ಸೀರೆಯನ್ನು ಉಟ್ಟುಕೊಳ್ಳುತ್ತ, ತಾವು ಉಟ್ಟ ಬಟ್ಟೆಯನ್ನೂ ಒಗೆದುಕೊಳ್ಳುವ ಉಮೇದಿನಲ್ಲಿ ಜಾರುತ್ತಿದ್ದ ಸೆರಗಿನ ಸೌಂದರ್ಯವನ್ನು ಕದ್ದು ನೋಡಲು ಅವರು ತಮ್ಮ ದೇಹವನ್ನು ನೀರೊಳಗೇ ಮುಳುಗಿಸಿಕೊಂಡು, ಹಸಿದ ಕಣ್ಣನ್ನಷ್ಟೇ ಸಕ್ರಿಯಗೊಳಿಸಿಕೊಂಡು ಕಾದು ಕುಳಿತಿರುತ್ತಿದ್ದರು.

ಅದೊಂದು ರಾತ್ರಿ... ಕರಾಳ ಮೌನ... ಕಾರ್ಕೋಟಕ ಕತ್ತಲು... ಬರೀ ಕತ್ತಲಲ್ಲ, ಚಂದ್ರನಿಲ್ಲದ ಕಗ್ಗತ್ತಲು... ಎರಡು ಪ್ರೀತಿಸಿದ ಹೃದಯಗಳು ಒಂದಾಗಲು ಹಾತೊರೆಯುತ್ತ ಮನೆಯಿಂದ ಆಚೆ ಬಂದುಬಿಟ್ಟಿದ್ದರು. ಅದೇನು ಕಾಮದ ಪ್ರೀತಿಯೋ, ಪ್ರೇಮದ ಪ್ರೀತಿಯೋ ತಿಳಿಯೆ. ಆಕೆ ಆ ದಡದಲ್ಲಿ, ಈತ ಈ ದಡದಲ್ಲಿ. ಯಾವ ಭರವಸೆ ಮತ್ತು ಧೈರ್ಯದ ಮೇಲೆ ಅವರಿಬ್ಬರೂ ಆ ಸರಿರಾತ್ರಿಯಲ್ಲಿ ಮನೆಯಿಂದ ಹೊರಬಂದಿದ್ದರೋ ಗೊತ್ತಿಲ್ಲ. ಅದಕ್ಕೇ ಪ್ರೀತಿ ಕುರುಡು ಎನ್ನುವುದಿರಬೇಕು. ಮುಂದೇನು ಎಂಬುದು ಇಬ್ಬರಿಗೂ ಗೊತ್ತಿಲ್ಲ. ಈತ ಈ ದಡದಿಂದ ಆ ದಡಕ್ಕೆ ಹೋಗಿ, ಆಕೆಯ ಕೈಹಿಡಿದಿದ್ದಾನೆ ಅಷ್ಟೇ. ಅಷ್ಟರಲ್ಲಿ ಅದೆಲ್ಲಿದ್ದರೋ ಹಳ್ಳಿಯ (ಹಳ್ಳಿ ಎಂದರೆ ಆಗ ನಾಲ್ಕೈದು ಮನೆಗಳ ಊರು ಅಷ್ಟೇ) ಜನರೆಲ್ಲ ಕಂದೀಲುಗಳನ್ನು ಹಿಡಿದು ಬಯಲಿಗೆ ಬಂದುಬಿಟ್ಟಿದ್ದಾರೆ. ನಿರ್ದಯಿ ನದಿಯೂ ಇವರ ನಿಟ್ಟುಸಿರ ಬಿಸಿಗೆ ಕಾದು ಆವಿಯಾಗಿ ಇಂಗಿಹೋದಂತೆ ಬತ್ತಲಾರಂಭಿಸಿತ್ತು. ತಪ್ಪಿಸಿಕೊಳ್ಳಲು ತೆಳ್ಳಗಿದ್ದ ನೀರಿನ ನದಿಯಲ್ಲಿ ಎದ್ದುಬಿದ್ದು ನೀರು ಹೆಚ್ಚಿದ್ದ ಗುಂಡಿಗಳನ್ನು ಈಜಿ ಎಳೆದುಕೊಂಡು ಈ ದಡಕ್ಕೆ ಕರೆದುಕೊಂಡು ಬಂದೇಬಿಟ್ಟಿದ್ದಾನೆ. ದಿಕ್ಕೆಟ್ಟ ಜನರೂ ಮಸುಕಿನಲ್ಲೂ ಆಕೃತಿಗಳನ್ನು ಸದ್ದಿನ ಆಧಾರದ ಮೇಲೆ ಅನುಸರಿಸಿಕೊಂಡು ಈ ದಡದವರೆಗೂ ಬಂದೇಬಿಟ್ಟರು. ಅವರ ಕೈಗಳಲ್ಲಿ ದೊಣ್ಣೆ ಬಡಿಗೆಗಳಿದ್ದವು. ಇವರೋ ಬರಿಗೈಯ ಭಸ್ಮಾಸುರರು. ಇಬ್ಬರ ಮೈಯೆಂಬುದು ಆ ತಂಪು ಕತ್ತಲಲ್ಲೂ ಬೆವರಿ, ಆ ಬಿಸಿಗೆ ನದಿನೀರಿಗೆ ನೆಂದ ಬಟ್ಟೆಗಳೂ ಒಣಗಲು ಶುರುವಾಗಿದ್ದವು. ಮುಂದೇನು ಎಂಬ ದಿಕ್ಕುದೆಸೆಯಿಲ್ಲದ ಅವರಿಗೆ ನನ್ನ ಬುಡಕ್ಕೆ ಒಂದು ಕಾಲಿಡುತ್ತಿದ್ದಂತೆಯೇ ಕೈನೀಡಿ ಮೇಲೆಳೆದುಕೊಂಡು ಕೂರಿಸಿಕೊಂಡೆ. ನಾನು ಎಳೆದುಕೊಂಡೆ ಎಂಬುದಕ್ಕಿಂತ ಅವರೇ ಪ್ರೇರಣೆಗೊಂಡು ಅದೆಷ್ಟು ಸಲೀಸಾಗಿ ಹತ್ತಿಕೊಂಡರು ಗೊತ್ತೇ! ಮನುಷ್ಯನ ದೇಹ ಕೂಡ ತನ್ನ ಕಾಲುಗಳು ದೇಹಕ್ಕೆ ಸಂಧಿಸುವ ಜಾಗದಲ್ಲಿ ಆಳೆತ್ತರಕ್ಕೆ ಕಾಲೆತ್ತಲೂ ಸಾಧ್ಯವಾಗುವಂತೆ ಸಂರಚನೆಗೊಂಡಿರುವುದರಿಂದ ಸುಲಭವಾಗಿತ್ತು. ಅವರಿಬ್ಬರನ್ನೂ ನನ್ನ ಎಂಟು ಕೊಂಬೆಗಳು ಕವಲೊಡೆದುಕೊಂಡಿದ್ದ ಸಂದಿಯಲ್ಲಿ ಹುದುಗಿಸಿಕೊಂಡೆ. ಅವರೂ ಅವಿತುಕೊಂಡು ಕುಳಿತಿದ್ದರು. ಭಯದ ಬೇಗೆಯಿಂದ ಕುದಿಯುತ್ತಿದ್ದ ದೇಹದಿಂದ ಹೊರಹೊಮ್ಮುತ್ತಿದ್ದ ಬಿಸಿಯುಸಿರಿನ ಬಿಸುಪಿನಲ್ಲಿ ಇಬ್ಬರ ದೇಹಗಳೂ ಒಂದಾಗಿ ತಲೆಯೆಂಬುದು ಕುತ್ತಿಗೆಗಳಿಂದ ಬಂಧಿಸಲ್ಪಟ್ಟಿತ್ತು. ತಮ್ಮ ಕಥೆ ಮುಗಿದೇಹೋಯಿತೆಂದು ಇಬ್ಬರೂ ಜೀವದ ಆಸೆಯನ್ನೇ ಬಿಟ್ಟು ಕಣ್ಣುಮುಚ್ಚಿಬಿಟ್ಟಿದ್ದರು.

ಆ ದುರುಳರೆಲ್ಲ ನನ್ನ ಬುಡಕ್ಕೆ ಬಂದು ನಿಂತವರು ಇಲ್ಲೇ ಮರ ಹತ್ತಿರಬೇಕೆಂದು ಮಾತಾಡಿಕೊಳ್ಳುತ್ತ ಕಂದೀಲನ್ನೆತ್ತಿ ಮೇಲೆಲ್ಲ ನಿರುಕಿಸಲಾರಂಭಿಸಿದ್ದರು. ಆಳೆತ್ತರಕ್ಕೂ ಎತ್ತರದಲ್ಲಿದ್ದ ನನ್ನ ಬುಡದಲ್ಲಿ ಅಡಗಿಕೊಂಡಿದ್ದ ಅವರ ಮೇಲೆ ಬೆಳಕು ಬಿತ್ತೇ ವಿನಾ ಇವರು ಅವರ ಕಣ್ಣಿಗೆ ಕಾಣಲಿಲ್ಲ. ಇವರ ಸುಳಿವೂ ಸಿಗದಂತೆ ನನ್ನೆಲ್ಲ ಎಲೆಗಳಿಂದ ಜೋರು ಗಾಳಿ ಬೀಸಿಸಿ ಆ ಕಂದೀಲಿನ ಬೆಂಕಿ ಆರಿಹೋಗುವಂತೆ ಮಾಡಿದೆ. ಅತ್ತ, ಒಂದು ಹರಿಯಿಂದ ಸಣ್ಣದೊಂದು ಒಣಗಿದ್ದ ಕೊಂಬೆಯನ್ನು ಗಾಳಿ ಬೀಸಿದ ನೆಪದಲ್ಲಿ ಕೆಳಕ್ಕೆ ಬೀಳಿಸಿದೆ. ಅವರಿಬ್ಬರೂ ಮರದಿಂದ ಕೆಳಕ್ಕೆ ನೆಗೆದು ತಪ್ಪಿಸಿಕೊಂಡು ಓಡುತ್ತಿದ್ದಾರೆ ಎಂದು ಭ್ರಮಿಸಿದ ಅವರೆಲ್ಲ ಅತ್ತ ಮುನ್ನುಗ್ಗಿ ಓಡಿಯೇಬಿಟ್ಟರು.

ಗೌಜು ಗದ್ದಲವೆಲ್ಲ ಕಳೆದು ಇನ್ನೇನು ಬೆಳಕು ಹರಿಯುವ ವೇಳೆಗೆ ಇಬ್ಬರೂ ನಿಟ್ಟುಸಿರು ಬಿಟ್ಟುಕೊಂಡು ಕೆಳಗಿಳಿದು, ಹುಸಿಮುನಿಸಿನಿಂದ ಎಲ್ಲ ನಿನ್ನಿಂದಲೇ ಎಂದು ಪರಸ್ಪರ ಬೈದುಕೊಳ್ಳುತ್ತ ಹೊಡೆದುಕೊಳ್ಳುತ್ತ ಪ್ರಣಯದ ಪಕ್ಷಿಗಳಂತೆ ಒಬ್ಬರ ಮೇಲೊಬ್ಬರಂತೆ ಏರುತ್ತ ಎತ್ತಲೋ ಹಾರಿಹೋದರು.

***

ಅದಾಗಿ ಎರಡೂವರೆ ಮೂರು ವರ್ಷಗಳೇ ಕಳೆದುಹೋಗಿರಬೇಕು. ತಿರುಗಿ ಬರುವ ವೇಳೆಗೆ ನದಿಯ ಸಾಕಷ್ಟು ನೀರು ಸಮುದ್ರ ಸೇರಿಬಿಟ್ಟಿತ್ತು. ಉಬ್ಬರದ ನದಿಯೂ ಇಳಿದಿತ್ತು. ಕೊತಕೊತನೆ ಕುದಿದಿದ್ದ ಜನರ ರಕ್ತವೂ ತಣ್ಣಗಾಗಿತ್ತು. ನಾನೂ ಇದನ್ನೆಲ್ಲ ಮರೆತುಬಿಟ್ಟಿದ್ದೆ. ಅವತ್ತು ಮನೆಯಿಂದ ಓಡಿಹೋಗಿ ನನ್ನ ಬುಡದಲ್ಲಿ ಅಡಗಿ ಜೀವ ಉಳಿಸಿಕೊಂಡಿದ್ದರಲ್ಲ, ಆ ಕಾಳಿಂಗ ಮತ್ತು ತುಂಗಾ, ಇಬ್ಬರೂ ಒಂದು ದಿನ ಇದ್ದಕ್ಕಿದ್ದಂತೆ ಒಂದು ಮಗುವಿನೊಂದಿಗೆ ಬಂದರು. ಬಂದವರು ನನ್ನ ಪಾದಕ್ಕೆ ತಲೆಯಿಟ್ಟು ನಮಸ್ಕರಿಸಿದರು. ಆ ಮಗುವಿನಿಂದಲೂ ಹಾಗೇ